ಅ) ಈಗಾಗಲೇ ಪ್ರಾರಂಭ ಮಾಡಿರುವ ಕಾಮಗಾರಿಗಳಾವುವು ?

ಇ) ಆ ಪೈಕಿ ಕಂಬೈಂಡ್ ಆಸ್ಪತ್ರೆ ಕಟ್ಟಡದ ಕೆಲಸವನ್ನು ಮುಂಗಿಸಲು ನಿಗದಿಪಡಿಸಿದ ಸಮಯ ವೇನು, ಹಾಗೂ ಆ ಕೆಲಸ ಯಾವಾಗ ಪೂರ್ಣಗೊಳಿಸಲಾಗುತ್ತದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು).—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ೧೯೮೭–೮೮ನೇ ಸಾಲಿಗೆ ಒಟ್ಟು ೮ ರಸ್ತೆ ಕೆಲಸ, ಒಂದು ಸೇತುವೆ ಕೆಲಸ ೭ ಹರಿಜನವಾಡ ಕೂಡುರಸ್ತೆಗಳು ೨ ಕಟ್ಟಡ ಕೆಲಸಗಳು ಮತ್ತು ೧ ಹೊಸ ಕೆರೆ ಮತ್ತು ೩ ಒಡ್ಡು ನಿರ್ಮಾಣದ ಕೆಲಸಗಳು ಸೇರಿರುತ್ತವೆ.

ಆ) ಈಗಾಗಲೇ ಪ್ರಾರಂಭಮಾಡಿರುವ ಕಾಮಗಾರಿಗಳಂತಿರುತ್ತವೆ.

೧) ೮ ರಸ್ತೆ ಕೆಲಸ ೨) ೭ ಹರಿಜನವಾಡ ಕೂಡು ರಸ್ತೆ ೩) ೨ ಕಟ್ಟಡದ ಕೆಲಸ ಮತ್ತು ೧ ಹೊಸಕೆರೆ ನಿರ್ಮಾಣ, ೧ ಒಡ್ಡು ನಿರ್ಮಾಣದ ಕೆಲಸ ತೆಗೆದುಕೊಂಡಿರುತ್ತದೆ.

ಇ) ಕಂಬೈಂಡ್ ಆಸ್ಪತ್ರೆ ಕೆಲಸವನ್ನು ಇಲಾಖಾಪತಿಯಿಂದ ತೆಗೆದಂಕೊಂಡಿರುವುದರಿಂದ ಸದರಿ ಕೆಲಸವನ್ನು ಪೂರ್ಣಗೊಳಿಸಲು ಕಾಲಾವಕಾಶ ನಿಗದಿ ಪಡಿಸಿರುವುದಿಲ್ಲ. ಆದಾಗ್ಯೂ ಈ ಕೆಲಸವನ್ನು ಡಿಸೆಂಬರ್ ೮೮ರ ಒಳಗೆ ಪೂರ್ಣಮಾಡಲು ಕ್ರಮ ಕೈಗೊಂಡಿರುತ್ತದೆ.

ರಾಜ್ಯ ಪುರ–ನಗರಸಭೆಗಳಿಗೆ ಆಕ್ಟ್ರಾಯಿ ಗ್ರ್ಯಾಂಟ್ ಮುಂಜೂರಾತಿ

೧೩೫೯. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪುರಸಭೆ, ನಗರಸಭೆಗಳಿಗೆ ಕೊಡಬೇಕಾದ ಆಕ್ಟ್ರಾಯಿ ಗ್ರ್ಯಾಂಟ್ ಬಿಡುಗಡೆಯಾಗಿದೆಯೇ ?

ಆ) ಹಾಗಿದ್ದಲ್ಲಿ ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡದಿರಲು ಕಾರಣವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಮತ್ತು ಆ) ಆಕ್ಟ್ರಾಯಿ ಅನುದಾನವನ್ನು ಈಗಾಗಲೇ ಎಲ್ಲಾ ಮಹಾನಗರಪಾಲಿಕೆಗಳಿಗೂ ನಗರ/ಪುರಸಭೆಗಳಿಗೂ ಬಿಡುಗಡೆ ಮಾಡಲಂ ಸರಕಾರ ಆದೇಶ ಹೊರಡಿಸಿದೆ.

ಕೊಣ್ಣೂರು ಪುರಸಭೆಯನ್ನು ಮುಂಡಲ ಪಂಚಾಯಂತನ್ನಾಗಿ ಪರಿವರ್ತಿಸುವುದು

೧೩೬೪. ಶ್ರೀ ಎಂ. ಎಲ್. ಪಂತ್ರಣ್ಣನವರ್ (ಗೋಕಾಕ್).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನ ಕೊಣ್ಣೂರು ಪುರಸಭೆಯನ್ನು ಮುಂಡಲ ಪಂಚಾಯತಿಯನ್ನಾಗಿ ಮಾಡಲಂ ಸಾರ್ವಜನಿಕರಿಂದ ಬೇಡಿಕೆ ಬಂದಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಮುಂಡಲ ಪಂಚಾಯತಿಯನ್ನಾಗಿ ಮಾಡದಿರಲು ಕಾರಣಗಳೇನು ಹಾಗೂ ಯಾವಾಗ ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಬಂದಿದೆ.

ಆ) ೧೯೭೧ನೇ ಜನಗಣತಿ ಪ್ರಕಾರ ಕೊಣ್ಣೂರು ಪುರಸಭೆಯು ಜನಸಂಖ್ಯೆ ಹತ್ತು ಸಾವಿರಕ್ಕೂ ಮೇಲ್ಪಟ್ಟು ಇರಂವುದರಿಂದ ಕೊಣ್ಣೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲು ಸಾಧ್ಯವಿಲ್ಲ.

ಉಪ್ಪಾರಟ್ಟಿ ಮತ್ತು ಮಾಲ್ದಿನ್ನಿ ಕುಡ್ಡಿಯುವ ನೀರಿನ ಯೋಜನೆ ಕುರಿತು

೧೩೬೫. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಪ್ಪಾರಟ್ಟಿ ಮಾಲ್ದಿನ್ನಿ ಕುಡಿಯುವ ನೀರಿನ ಯೋಜನೆ ಕೆಲಸ ಯಾವ ಹಂತದಲ್ಲಿದೆ ?

ಆ) ಈ ಯೋಜನೆ ಮುಗಿಯಲು ಬೇಕಾಗಂವ ಅವಧಿ ಎಷ್ಟು ಹಾಗೂ ಯಾವಾಗ ಮುಗಿಸಲಾಗುತ್ತದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಈ ಯೋಜನೆಗೆ ಘಟಪ್ರಭಾ ನದಿಯಲ್ಲಿರುವ ಸಣ್ಣ ನೀರಾವರಿ ಜಾಕವೆಲ್ಲನ್ನು ಮೂಲವನ್ನಾಗಿ ಪರಿಗಣಿಸಿದ್ದು, ಉಪ್ಪಾರಟ್ಟಿ ಗ್ರಾಮದಲ್ಲಿ ಭೂ ಮಟ್ಟದ ಜಲ ಸಂಗ್ರಹಾಲಯ ಪೂರ್ತಿಯಾಗಿದೆ. ಮಾಲದಿನ್ನಿ ಗ್ರಾಮದಲ್ಲಿ ಮೇಲ್ಮಟ್ಟ ಜಲಸಂಗ್ರಹಾಲಯ ಮುಗಿಯುವ ಹಂತದಲ್ಲಿದೆ. ಉಳಿದ ಕೆಲಸಗಳನ್ನು ಕೈಗೊಳ್ಳಬೇಕಾಗಿದೆ.

ಆ) ೧೯೮೪ನೇ ಇಸವಿಯ ಕೊನೆಯಲ್ಲಿ ಈ ಯೋಜನೆಯನ್ನು ಮುಗಿಸಲು ಉದ್ದೇಶಿಸಿದೆ.

ಭೂ ಸೇನಾ ನಿಗಮದಿಂದ ಕೈಗೊಂಡಿರುವ ಕೆಲಸಗಳು

೧೩೭೪. ಜಿ.ಶ್ರೀ ರಾಮದಾಸ್ (ಹೊಸದುರ್ಗ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಭೂ ಸೇನಾ ನಿಗಮದಿಂದ ೧೯೮೬-೮೭ ಮತ್ತು ೧೯೮೭-೮೮ರ ಸಾಲಿನಲ್ಲಿ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ, ಇದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ ?

ಆ) ಸದರಿ ತಾಲ್ಲೂಕಿನಲ್ಲಿ ೧೯೮೮-೮೯ನೇ ಸಾಲಿನಲ್ಲಿ ಭೂ ಸೇನಾ ನಿಗಮದಿಂದ ದುರ್ಬಲ ವರ್ಗದವರಿಗಾಗಿ ಕಡಿಮೆ ವೆಚ್ಚದ ಮನೆಗಳನ್ನು ಎಷ್ಟು ಮಂಜೂರು ಮಾಡಲು ಕ್ರಮಕೈಗೊಳ್ಳಲಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

೧. (ಅ) ೧೯೮೬-೮೭ರಲ್ಲಿ ರೂ. ೧೭.೭೨ ಲಕ್ಷ ಖರ್ಚು ಮಾಡಲಾಗಿದೆ. ದಯವಿಟ್ಟು ಅನುಸೂಚಿ ೧ರಲ್ಲಿ ವಿವರವನ್ನು ನೋಡಿ.

೨. ೧೯೮೭-೮೮ (ಫೆಬ್ರವರಿ ೮೮ರವರೆಗೆ) ರೂ. ೨೦.೦೬ ಲಕ್ಷ ಖರ್ಚು ಮಾಡಲಾಗಿದೆ. ದಯವಿಟ್ಟು ಅನುಸೂಚಿ ೨ರಲ್ಲಿ ವಿವರವನ್ನು ನೋಡಿ.

ಆ) ೧೯೮೮-೮೯ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಸ್‌ಸಿ-ಎಸ್‌ಟಿಯವರಿಗೆ ೫೦ ಮನೆಗಳನ್ನು ಸುಮಾರು ರೂ. ೬.೬೫ ಲಕ್ಷದಲ್ಲಿ ಖರ್ಚು ಮಾಡಲು ಮಂಜೂರಾತಿಗೆ ಭಾರತ ಸರ್ಕಾರಕ್ಕೆ ಕಳಿಸಲಾಗಿತ್ತು.